ರಾಜ್ಯದಲ್ಲಿ ದುಡಿಯುತ್ತಿರುವ ಬಾಲಕಾರ್ಮಿಕರು ಮತ್ತು ಇದರಿಂದ ಉಂಟಾಗಿರುವ ವಯಸ್ಕ ನಿರುದ್ಯೋಗದ ಬಗ್ಗೆ

೩೦೪. ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ).—ಮಾನ್ಯ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ದುಡಿಯುತ್ತಿರುವ ಬಾಲ ಕಾರ್ಮಿಕರ ಸಂಖ್ಯೆ ಎಷ್ಟು ? ಮತ್ತು ಇದರಿಂದ ವಯಸ್ಕ ನಿರುದ್ಯೋಗಿಗಳು ಬೀದಿ ಪಾಲಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಬಾಲ ಕಾರ್ಮಿಕರಂ ದುಡಿಯುವುದನ್ನು ತಡೆಗಟ್ಟಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಸಚಿವರು).—

ಅ) ರಾಜ್ಯದಲ್ಲಿ ದುಡಿಯುತ್ತಿರುವ ಬಾಲ ಕಾರ್ಮಿಕರ ಸಂಖ್ಯೆಯ ಸಮೀಕ್ಷೆಯನ್ನು ಇದುವರೆವಿಗೂ ನಡೆಸಿರುವುದಿಲ್ಲ.

ರಾಜ್ಯದಲ್ಲಿ ಬಾಲ ಕಾರ್ಮಿಕರು, ಹೋಟೆಲುಗಳು ಮೋಟಾರು ವಾಹನ ಕೈಗಾರಿಕೆ, ಗ್ಯಾರೇಜ ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ನಿಜ.

ಆ) ಕೇಂದ್ರ ಸರ್ಕಾರದವರು ಬಾಲ ಕಾರ್ಮಿಕರು ದುಡಿಯುವುದನ್ನು ತಡೆಗಟ್ಟಲು ೧೯೮೬ರಲ್ಲಿಯೇ ಪ್ರೊಹಿಬಿಷನ್ ಆಫ್ ಚೈಲ್ಡ್ ಲೇಬರ್ ಮತ್ತು ರೆಗ್ಯೂಲೇಷನ್ ಆಕ್ಟ್ ೧೯೮೬ರಲ್ಲಿ ಕಾಯ್ದೆಯನ್ನು ಮಾಡಿದ್ದಾರೆ.

ಶ್ರೀ ಕೆ. ಹರ್ಷಕುಮಾರಗೌಡ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಬಾಲಕಾರ್ಮಿಕರು ಎಷ್ಟು ಜನ ದುಡಿಯುತ್ತಿದ್ದಾರೆ ಎಂದು ಪ್ರಶ್ನೆ ಕೇಳಿದರೆ ಹಾಗೂ ಇದರ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ ಎಂದು ಕೇಳಿದರೆ 'ಸಮೀಕ್ಷೆ' ನಡೆಸಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ, ಸಮೀಕ್ಷೆ ಇದುವರೆಗೆ ಏಕೆ ಆಗಿಲ್ಲವೆಂದು ಮಾನ್ಯ ಸಚಿವರಿಂದ ನಾನು ಉತ್ತರ ಬಯಸುತ್ತೇನೆ. ನನ್ನ ೨ನೇ ಪ್ರಶ್ನೆ ಏನೆಂದರೆ, ಈ ರಾಜ್ಯದಲ್ಲಿ ಹೊಟೇಲು ಕಾರ್ಮಿಕರು ಎಷ್ಟು ಜನ ಇದ್ದಾರೆ ಎಂದು. ಇದಕ್ಕೂ ಮೊದಲು ಹೋಟೆಲುಗಳಲ್ಲಿ ಬಾಲ ಕಾರ್ಮಿಕರು ದುಡಿಯುತ್ತಿಲ್ಲವೇ ಎಂದು. ನನ್ನ ಸಹಸದಸ್ಯರು ಒಂದು ಪ್ರಶ್ನೆಯನ್ನು ಕೇಳಿದಾಗ ಬಾಲಕಾರ್ಮಿಕರು ಹೋಟೆಲ್‌ಗಳಲ್ಲಿ ದುಡಿಯುತ್ತಿಲ್ಲ ಎಂದು ಶ್ರೀ ಶಿವಣ್ಣನವರು ಉತ್ತರ ಕೊಟ್ಟಿದ್ದಾರೆ. ಆದರೆ ನನಗೆ ಇಲ್ಲಿ ಉತ್ತರ ಬಂದಿದೆ, ಏನೆಂದರೆ ಈ ರಾಜ್ಯದಲ್ಲಿ ಬಾಲಕಾರ್ಮಿಕರು ಹೋಟೆಲುಗಳಲ್ಲಿ, ಮೋಟಾರು, ಕೈಗಾರಿಕೆ, ಗ್ಯಾರೇಜುಗಳಲ್ಲಿ ದುಡಿಯುತ್ತಿದ್ದಾರೆ ಎಂದು. ಆದರೆ ಕರ್ನಾಟಕದಲ್ಲಿ ಹೋಟೆಲ್‌ಗಳಲ್ಲಿ ಬಾಲಕಾರ್ಮಿಕರು ದುಡಿಯುತ್ತಿಲ್ಲ ಎಂದು ಮತ್ತೊಂದು ಕಡೆ ಹೇಳುತ್ತಾರೆ ಇದರಲ್ಲಿ ಯಾವುದು ನಿಜವೆಂದು ಸ್ಪಷ್ಟೀಕರಣ ಕೊಡಬೇಕು. ಜೊತೆಗೆ ಬಾಲ ಕಾರ್ಮಿಕರು ಕೆಲಸ ಮಾಡುವುದನ್ನು ನಿಷೇಧಿಸಿ ಒಂದು ಕಾಯಿದೆ ಕೇಂದ್ರದಲ್ಲಿ ಇದ್ದರೆ ರಾಜ್ಯದಲ್ಲಿಯೂ ಇದರ ಬಗ್ಗೆ ಕಾಯಿದೆ ಏಕೆ ಆಗಿಲ್ಲ? ಇದರ ಬಗ್ಗೆ ಮಾನ್ಯಮಂತ್ರಿಗಳಿಂದ ಉತ್ತರವನ್ನು ಬಯಸುತ್ತೇನೆ.

ಶ್ರೀ ಬಿ. ಶಿವಣ್ಣ.—ಅಧ್ಯಕ್ಷರೇ, ಕೇಂದ್ರಸರ್ಕಾರ ಕಾಯಿದೆ ಮಾಡಿದ್ದು ಅದನ್ನು ನಮ್ಮ ರಾಜ್ಯ ಸರ್ಕಾರ ಇಂಪ್ಲಿಮೆಂಟ್ ಮಾಡಿದೆ. ಇಂತಹ ಕಾಯಿದೆ ನಮ್ಮ ಸರ್ಕಾರ ಮಾಡಿಲ್ಲ. ಕೇಂದ್ರಸರ್ಕಾರ ೧೪ ವರ್ಷದ ಕೆಳಗೆ ಇದ್ದವರಿಗೆ ಹಜಾರ್ಡಸ್ ಜಾಬ್ಸ್ ಮಾಡಬಾರದು ಎಂದು ನಿಷೇಧಾಜ್ಞೆ ಮಾಡಿದೆ, ಇದನ್ನು ನಾವು ಇಂಪ್ಲಿಮೆಂಟ್ ಮಾಡಿದ್ದೇವೆ. ಆದರೆ ಅಲ್ಲಲ್ಲಿ ಕೆಲವು ಬಾಲಕರಿಗೆ ಮೋಟಾರು ಗ್ಯಾರೇಜ್ ಹೋಟೆಲ್, ಸಿನಿಮಾಗಳಲ್ಲಿ ಕೆಲಸ ಮಾಡುವುದು ಉಂಟು. ಅವರಿಗೆ ನಾವು ರಕ್ಷಣೆ ಕೊಡುತ್ತೇವೆ. ಅಲ್ಲದೆ ಕೇಂದ್ರ ಸರ್ಕಾರದವರು ಪ್ರಾಹಿಬಿಟ್ ಮಾಡಿದ್ದಾರೆ. ದೊಡ್ಡ ದೊಡ್ಡ ಫ್ಯಾಕ್ಟರಿಗಳಲ್ಲಿ ಹಾಗೂ ಬೇರೆ ಕಡೆಗಳಲ್ಲಿ ಕೆಲಸ ಮಾಡಬಾರದು ಎಂದು ಪ್ರಾಹಿಬಿಟ್ ಮಾಡಿರುವುದರಿಂದ ನಾವು ಬಾಲಕರ ಬಗ್ಗೆ ಕಾಳಜಿ ವಹಿಸಿ ಕೇಂದ್ರದ ಕಾಯಿದೆಯನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಆದರೆ ರಾಜ್ಯ ಸರ್ಕಾರವೇ ಇಂತಹ ಯಾವುದೇ ಕಾಯಿದೆಯನ್ನು ಮಾಡಿಲ್ಲ. ಕೇಂದ್ರಸರ್ಕಾರದ ಕಾಯಿದೆಯನ್ನು ಇಂಪ್ಲಿಮೆಂಟ್ ಮಾಡಿದ್ದೇವೆ.

ಶ್ರೀ ಕರಿಯಣ್ಣ.—ಮಾನ್ಯ ಅಧ್ಯಕ್ಷರೇ, ನನಗೆ ಕಳುಹಿಸಿದ್ದ ಇಂತಹ ಪ್ರಶ್ನೆಗೆ ಬಾಲಕಾರ್ಮಿಕರು ಕೆಲಸ ಮಾಡುತ್ತಾ ಇಲ್ಲ ಎಂದು ಉತ್ತರ ಹೇಳಿದ್ದಾರೆ.

ಶ್ರೀ ಕೆ. ಹರ್ಷಕುಮಾರಗೌಡ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಕರಿಯಣ್ಣನವರಿಗೆ ಕೆಲಸ ಮಾಡುತ್ತಾ ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಮತ್ತೆ ಈಗ ಕೆಲಸ ಮಾಡುತ್ತಿದ್ದಾರೆಂದು ಮಂತ್ರಿಗಳಂ

ಒಪ್ಪಿದ್ದಾರೆ. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಈ ಎರಡೂ ಉತ್ತರಗಳಲ್ಲಿ ಯಾವುದು ಸರಿ ಎಂದು ಸ್ಪಷ್ಟವಾದ ಖಚಿತವಾದ ಉತ್ತರ ಏನು ನನಗೆ ಗೊತ್ತಾಗುತ್ತಾ ಇಲ್ಲ. ಇದರ ಜೊತೆಗೆ ಕೇಂದ್ರಸರ್ಕಾರದ ಬಾಲ ಕಾರ್ಮಿಕ ಕಾಯಿದೆ ಈ ರಾಜ್ಯದಲ್ಲಿ ಇದ್ದಮೇಲೆ ಇದುವರೆಗೂ ಈ ಕಾಯಿದೆಯನ್ನು ಅನುಷ್ಠಾನಕ್ಕೆ ತಂದಮೇಲೆ ಈ ರಾಜ್ಯದಲ್ಲಿ ಎಷ್ಟು ಜನ ಬಾಲ ಕಾರ್ಮಿಕರಿಗೆ ಪುನರ್ ವಸತಿಯನ್ನು ಕಲ್ಪಿಸಿದ್ದೀರಿ ಎಂಬುದನ್ನು ಹೇಳಬೇಕು.

ಶ್ರೀ ಬಿ. ಶಿವಣ್ಣ.—ನಮ್ಮ ಹತ್ತಿರ ಇಂತಹ ಪ್ರಯತ್ನಗಳು ಯಾವುವೂ ಆಗಿಲ್ಲ. ಕೇಂದ್ರ ಸರ್ಕಾರದ ಕಾಯಿದೆಯನ್ನು ಇಂಪ್ಲಿಮೆಂಟ್ ಮಾಡುತ್ತಾ ಇದ್ದೇವೆ

ಶ್ರೀ ಕೆ. ಹರ್ಷಕುಮಾರಗೌಡ.—ಮಾನ್ಯ ಸಚಿವರಲ್ಲಿ ಇಂತಹ ಒಂದು ಪ್ರಮುಖವಾದ ಪ್ರಶ್ನೆಯನ್ನು ಏತಕ್ಕೆ ಕೇಳುವುದಕ್ಕೆ ಇಚ್ಛಿಪಡುತ್ತೇನೆಂದರೆ, ಬಾಲಕಾರ್ಮಿಕರನ್ನು ಈ ರಾಜ್ಯದಲ್ಲಿ ದುಡಿಸುವ ಮುಖಾಂತರ, ವಯಸ್ಕ ನಿರುದ್ಯೋಗಿ ಜನ ಯಾರಿದ್ದಾರೆ, ಅವರಲ್ಲಿ ಬೀದಿಪಾಲಾಗುತ್ತಿದ್ದಾರೆ. ಯಾವ ಮಕ್ಕಳ ಮಾನಸಿಕ, ದೈಹಿಕ ಶಕ್ತಿಯು ಶೋಷಣೆಯಾಗಬಾರದೋ, ಅದು ಈ ರಾಜ್ಯದಲ್ಲಿ ಆಗುತ್ತಾ ಇದೆ. ಇದನ್ನು ನಿಲ್ಲಿಸುವ ಮುಖಾಂತರ, ಅವರಿಗೆ ಪುನರ್‌ವಸತಿ ಕಲ್ಪಿಸುವ ಮುಖಾಂತರ ಮತ್ತೆ ಈ ಒಂದು ಕ್ಷೇತ್ರದಲ್ಲಿ ದುಡಿಯದೇ ಇರುವಂತೆ ಮಾಡಲು ಸಂವಿಧಾನಾತ್ಮಕವಾಗಿ, ವಿದ್ಯಾ ಕ್ಷೇತ್ರದಲ್ಲಿ ಯಾವ ರೀತಿ ಕಡ್ಡಾಯ ಶಿಕ್ಷಣ ಇದೆ ಹಾಗೆ ಇದನ್ನು ಕಾರ್ಯಗತ ಮಾಡಬೇಕಾಗಿದೆ. ಇವತ್ತು ಈ ವಯಸ್ಕ ನಿರುದ್ಯೋಗಿಗಳಿಗೆ ಒದಲಾಗಿ ಕರ್ನಾಟಕದ ಮನೆ ಮನೆಗಳಲ್ಲಿ, ಈ ಬಾಲ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಈ ವಯಸ್ಕ ನಿರುದ್ಯೋಗಿಗಳಿಗೆ ಕೆಲಸ ಕೊಡುವಂಥ ಉದ್ದೇಶದಿಂದ ಈ ಬಾಲ ಕಾರ್ಮಿಕರನ್ನು ಹೊರಗೆ ಹಾಕುವಂಥ ಕೆಲಸ ಆಗಬೇಕು. ಆಗ ನಿರುದ್ಯೋಗಿಗಳಿಗೆ ಕೆಲಸ ಒದಗಿಸಿ ಕೊಡಲು ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ತಾವು ಯಾವ, ಯಾವ ರೀತಿ ಪ್ರಯತ್ನ ಪಡುತ್ತೀರಿ, ಮತ್ತು ಯಾವ ರೀತಿಯ ಕಾರ್ಯ ಕೈಗೊಳ್ಳುತ್ತೀರಿ ಎಂಬುದನ್ನು ಹೇಳುತ್ತೀರಾ?

ಶ್ರೀ ಬಿ. ಶಿವಣ್ಣ.—ಈ ಬಗ್ಗೆ ಕೇಂದ್ರಸರ್ಕಾರ ರೂಲ್ಸ್ ಮಾಡಿದೆ, ನಾವು ರೂಲ್ಸ್ ಫ್ರೇಮ್ ಮಾಡಿಲ್ಲ. ಆದರೂ ಕೂಡ ನಾವು ನಂದನಾರೆಡ್ಡಿ ಸಮಿತಿ ವರದಿ ಏನಿದೆ. ಅದನ್ನು ಈ ದಿಸೆಯಲ್ಲಿ ಪರಿಶೀಲನೆ ಮಾಡುತ್ತಾ ಇದ್ದೇವೆ. ಬಾಲಕರಿಗೆ ಯಾವ ಪ್ರಕಾರ ಅನುಕೂಲ ಮಾಡಿಕೊಡಬೇಕು, ಯಾವ ರೀತಿಯಲ್ಲಿ ಅವರಿಗೆ ಪ್ರೊಟೆಕ್ಷನ್ ಕೊಡಬೇಕೆಂಬುದನ್ನು ಯೋಚನೆ ಮಾಡುತ್ತಿದ್ದೇವೆ. ಬೇರೆ ಬೇರೆ ಇಲಾಖೆಗಳ ಮುಖಾಂತರವೂ ಈ ಬಾಲಕರಿಗೆ ಎಷ್ಟೋ ಸಹಾಯವನ್ನು ಮಾಡುತ್ತಿದ್ದೇವೆ.

ಶ್ರೀ ಕರಿಯಣ್ಣ.—ಮಾನ್ಯ ಅಧ್ಯಕ್ಷರೇ, ನನಗೆ ಕೊಟ್ಟಿರತಕ್ಕ ಉತ್ತರದಲ್ಲಿ ಬಾಲಕಾರ್ಮಿಕರ ಯಾರೂ ಕೆಲಸ ಮಾಡುತ್ತಾ ಇಲ್ಲ ಎಂದು ಹೇಳಿದ್ದಾರೆ, ಆದರೆ ಈ ದಿನ ಕೊಟ್ಟಿರುವ ಉತ್ತರವೇ ಬೇರೆ ಆಗಿದೆ, ಈ ಇಲಾಖೆಯ ಅಧಿಕಾರಿಗಳು ಒಂದು ಕಡೆ ಹೀಗೆ ಇಲ್ಲವೆಂದು ಹೇಳುವುದು, ಇನ್ನೊಂದು ಕಡೆ ಕೆಲಸ ಮಾಡುತ್ತಿದ್ದಾರೆ ಎಂದು ಹೇಳುವುದನ್ನು ಮಂತ್ರಿಗಳು ಒಪ್ಪಿಕೊಳ್ಳುವುದಾದರೆ, ಇಲಾಖಾ ಅಧಿಕಾರಿಗಳಂ ಸಮರ್ಪಕವಾಗಿ ಕೆಲಸ ಮಾಡುತ್ತಿದ್ದಾರೆಯೇ ಹೇಗೆ ಎಂಬುದನ್ನು ನಾನು ಕೇಳುತ್ತೇನೆ.

ಶ್ರೀ ಬಿ. ಶಿವಣ್ಣ.—ನಾನು ತಮಗೆ ಹೇಳಿದ್ದೇನೆ, Child labour is prohibited under the Constitution. There is a law by the Government of India. ಎಲ್ಲೆಲ್ಲಿ ಇಂತಹ ದೂರುಗಳು ಬರುತ್ತಿವೆ, ಅಂತಹ ಕಡೆಗಳಲ್ಲಿ ಈ ಕಾನೂನನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡಿ, ಅವರಿಗೆ ರಕ್ಷಣೆ ಕೊಡುತ್ತೇವೆ.

ಅಧ್ಯಕ್ಷರು.—ನೀವು ಕೊಟ್ಟಿರತಕ್ಕ ಉತ್ತರಗಳಲ್ಲಿ ವ್ಯತ್ಯಾಸ ಇದೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಹರ್ಷಕುಮಾರಗೌಡ.—ಮಾನ್ಯ ಕರಿಯಣ್ಣನವರಿಗೆ ಕೊಟ್ಟಿರುವ ಉತ್ತರವನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ. ಇಲಾಖೆಗಳಿಂದ ನಮಗೆ ಬರುವ ಉತ್ತರಗಳಲ್ಲಿ ಏನು ಅಸ್ಪಷ್ಟತೆ ಇದೆ, ಅದನ್ನು ನಿವಾರಣೆ ಮಾಡುವುದಕ್ಕೆ ಸಹಾಯವಾಗುತ್ತದೆಂದು ತಿಳಿದು ಇದನ್ನು ಹೇಳುತ್ತೇನೆ. ರಾಜ್ಯದ ಬಹುತೇಕ ಸಿನಿಮಾ, ಹೋಟೆಲು ಇತ್ಯಾದಿಗಳಲ್ಲಿ ೬ ರಿಂದ ೧೨ವರ್ಷದ ಮಕ್ಕಳು ಕೆಲಸ ಮಾಡುತ್ತಿರುವುದು ನಿಜವೇ ಎಂದು ಶ್ರೀ ಕರಿಯಣ್ಣನವರು ಕೇಳಿರುವುದಕ್ಕೆ, ಸಂಪೂರ್ಣವಾಗಿ ನಿಜವಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ಅದೇರೀತಿಯ ಪ್ರಶ್ನೆಯನ್ನು ನಾನು ಕೇಳಿದಾಗ, ರಾಜ್ಯದ ಬಾಲ ಕಾರ್ಮಿಕರು, ಕೈಗಾರಿಕೆ, ಹೋಟೆಲು, ಮೋಟಾರು ಗ್ಯಾರೇಜುಗಳು, ಸಿನಿಮಾಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ ಎಂದು ಹೇಳಿದ್ದಾರೆ ಹೀಗೆ ಒಂದೇ ಪ್ರಶ್ನೆಗೆ ಎರಡು ರೀತಿಯ ಉತ್ತರಗಳನ್ನು ಕೊಡುವುದರಿಂದ ವ್ಯತ್ಯಾಸ ವಾಗುವುದಿಲ್ಲವೇ ?

ಶ್ರೀ ಬಿ. ಶಿವಣ್ಣ.—ಕೆಲವು ಬಾಲಕಾರ್ಮಿಕರು, ಹೋಟೆಲುಗಳಲ್ಲಿ, ಸಿನಿಮಾಗಳಲ್ಲಿ ಅಥವಾ ಗ್ಯಾರೇಜುಗಳಲ್ಲಿ ಕೆಲಸ ಮಾಡುತ್ತಿರುವುದು ಗೊತ್ತಿದೆ. ಎಲ್ಲೆಲ್ಲಿ ಪ್ರಾಹಿಬಿಷನ್ ಆಕ್ಟ್ ಬರುತ್ತದೆ, ಈ ಆಕ್ಟನ್ನು ಮೀರಿ ಯಾರು ಕೆಲಸ ಮಾಡುತ್ತಾರೆ, ಅಂತಹವರ ಬಗ್ಗೆ ದೂರನ್ನು ಕೊಡಿ, ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ, ಹಾಗೂ ಈ ಕಾನೂನನ್ನು ಇಂಪ್ಲಿಮೆಂಟ್ ಮಾಡುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.— ಮಾನ್ಯ ಅಧ್ಯಕ್ಷರೇ, ಒಂದು ಪ್ರಶ್ನೆಗೆ ಎರಡು ರೀತಿಯಾದಂಥ ಉತ್ತರಗಳನ್ನು ಕೊಟ್ಟಿರತಕ್ಕಂಥದ್ದು ಸರಿಯಾಗಿ ಕಂಡುಬರುವುದಿಲ್ಲ. ಉತ್ತರಗಳನ್ನು ಸರಿಯಾಗಿ ಕೊಡಬೇಕು. ಮೊದಲನೆಯದಾಗಿ ಈ ಬಗ್ಗೆ ಕಾಗ್ನಿಜಬಲ್ ಆಫೆನ್ಸ್ ಎಂದು ಕಂಡು ಬಂದಾಗ ಅದನ್ನು ತನಿಖೆ ಮಾಡಬೇಕಾದ ಅಗತ್ಯ ಇಲ್ಲ. ಪ್ರತಿ ತಾಲ್ಲೂಕಿನಲ್ಲೂ ಲೇಬರ್ ಇನ್‌ಸ್ಪೆಕ್ಟರ್ಸ್ ಇದ್ದಾರೆ ಅವರು ಪ್ರತಿಯೊಂದು ಬಿಸಿನೆಸ್ ಎಸ್ಟಾಬ್ಲಿಷ್‌ಮೆಂಟನ್ನೂ, ಅಂದರೆ ಅದು ಅಂಗಡಿ ಇರಬಹುದು ಹೋಟೆಲ್ ಇರಬಹುದು, ಈ ತರದ ರಿಜಿಸ್ಟರ್ಡ್ ಫರ್ಮ್ಸ್ ಏನಿದ್ದಾವೆ, ಅವುಗಳನ್ನು ಪ್ರತಿತಿಂಗಳೂ ಪ್ರತಿವರ್ಷವೂ ತನಿಖೆ ಮಾಡುತ್ತಾರೆ. ಅಂತಹ ಸನಿವೇಶದಲ್ಲಿ ಎಷ್ಟು ಇಂತಹ ತನಿಖೆಗಳನ್ನು ನಿಮ್ಮ ಅಧಿಕಾರಿಗಳು ನೇರವಾಗಿ ಅಮಾಗಿಯೇ ಮಾಡಿರುತ್ತಾರೆ, ಹಾಗೂ ಅಂತಹ ಸಂದರ್ಭದಲ್ಲಿ ಇಂತಹ ದೋಷಗಳು ಕಂಡು ಬರುವುದಿಲ್ಲವೇ ?

ಶ್ರೀ ಬಿ. ಶಿವಣ್ಣ — ಅಧ್ಯಕ್ಷರೇ, ಬಾಲ ಕಾರ್ಮಿಕರ ಬಗ್ಗೆ ಯಾವುದೇ ಸರ್ವೆಯನ್ನು ನಾವು ಮಾಡಿಲ್ಲವೆಂದು ನಾನು ಮೊದಲೇ ಹೇಳಿದ್ದೇನೆ. ಆದರೂ ಕೂಡಾ ಕೆಲವು ಬಾಲಕಾರ್ಮಿಕರು, ಹೋಟೆಲುಗಳಲ್ಲಿ, ಮೋಟಾರ್ ವಾಹನ ಉದ್ಯಮಗಳಲ್ಲಿ ಮೊದಲಿನಿಂದಲೂ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಅದನ್ನು ತಡೆಗಟ್ಟುವ ಸಲುವಾಗಿ ನಾವು ಶ್ರೀಮತಿ ನಂದನ್‌ರೆಡ್ಡಿ ಅವರ ಕಮಿಟಿಯನ್ನು ಅಪಾಯಿಂಟ್ ಮಾಡಿರುತ್ತೇವೆ. ಆದರ ರಿಪೋರ್ಟ್ ಬಂದಮೇಲೆ, ಅದನ್ನು ಪರಿಶೀಲನೆ ಮಾಡಿದ ಮೇಲೆ ಸರಕಾರ ಈ ಬಗ್ಗೆ ಉತ್ತರ ಹೇಳಬಹುದು.

ಶ್ರೀ ಎಂ. ಕೆ. ಆನಂತಕೃಷ್ಣ.—ಈ ಬಗ್ಗೆ ಯಾವುದೇ ಸರ್ವೆ ಮಾಡಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದು ಸೂಕ್ತವಾದ ಉತ್ತರ ಅಲ್ಲ ಎಂದು ನಾನು ಭಾವಿಸುತ್ತೇನೆ. ಕಾಗೋಡು ತಿಮ್ಮಪ್ಪನವರು ಹೇಳಿದಹಾಗೆ ಲೇಬರ್ ಇನ್‌ಸ್ಪೆಕ್ಟರ್‌ಗಳು, ಲೇಬರ್ ಆಫೀಸರ್‌ಗಳು ಪ್ರತಿವರ್ಷವೂ ಪ್ರತಿಯೊಂದು ಕಾರ್ಖಾನೆಯನ್ನು ಪ್ರತಿಯೊಂದು ಎಸ್ಟಾಬ್ಲಿಷ್‌ಮೆಂಟನ್ನು ಇನ್‌ಸ್ಪೆಕ್ಷನ್ ಮಾಡುತ್ತಾರೆ. ಅದಕ್ಕಿಂತ ಹೆಚ್ಚಾಗಿ ಕೊಶ್ಚನೀರ್ ಕಳುಹಿಸಿಕೊಡುತ್ತಾರೆ. ಅದನ್ನು ಅವರು ಸೂಕ್ತವಾಗಿ ಫರ್ತಿ ಮಾಡಿ ಕಳುಹಿಸಿಕೊಟ್ಟ ಮೇಲೇ, ಲೈಸೆನ್ಸ್ ರಿನ್ಯೂ ಮಾಡಬೇಕು. ಆದರಲ್ಲಿ ಎಲ್ಲಾ ಹೇಳಬೇಕಾಗಿ ಬರುತ್ತದೆ. ಬಾಲಕಾರ್ಮಿಕರು ಎಷ್ಟು ಎಷ್ಟು ಜನ ಇದ್ದಾರೆ, ಹೆಣ್ಣುಮಕ್ಕಳು ಎಷ್ಟು ಜನ ಇದ್ದಾರೆ ಎಂದು ಹೇಳಬೇಕು. ಅಂತಹ ಒಂದು ಸ್ಟಾಟಿಸ್ಟಿಕ್ಸ್ ಇವರಲ್ಲಿ ಇಲ್ಲವೇ ?

ಶ್ರೀ ಬಿ. ಶಿವಣ್ಣ.— ಇದರ ಬಗ್ಗೆ ಯಾವುದೇ ಸರ್ವೆ ಮಾಡಿಲ್ಲವೆಂದು ನಾನು ಹೇಳಿದೆನಲ್ಲ.

ಅಧ್ಯಕ್ಷರು.— ಸರ್ವೆ ಮಾಡಿಲ್ಲ.!

ಶ್ರೀ ಕಾಗೋಡು ತಿಮ್ಮಪ್ಪ. — ಆದರೆ ಇನ್‌ಸ್ಪೆಕ್ಷನ್ ಆಗುತ್ತದಲ್ಲ.

ಶ್ರೀ ಬಿ. ಶಿವಣ್ಣ.— ಇನ್‌ಸ್ಪೆಕ್ಷನ್ ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.— ಆ ವೇಳೆಯಲ್ಲಿ ಫರ್ಮ್ಸ್, ಹೋಟೆಲ್ಸ್ ಈ ರೀತಿ ಯಾವುದೇ ರಿಜಿಸ್ಟರ್ಡ್ ಆಗಿರುವ ಎಸ್ಟಾಬ್ಲಿಷ್‌ಮೆಂಟ್ಸ್ ಏನಿರುತ್ತವೆ ಅದರ ಪಟ್ಟಿ ಕಾರ್ಮಿಕ ಇಲಾಖೆಯಲ್ಲಿ ಇದ್ದೇ ಇದೆ. ಪ್ರತಿವರ್ಷವೂ ಇನ್‌ಸ್ಪೆಕ್ಷನ್ ಮಾಡುತ್ತಾರೆ. ಆ ರೀತಿ ಇನ್‌ಸ್ಪೆಕ್ಷನ್ ಮಾಡಿದಾಗ ಈ ಎಲ್ಲ ವಿವರಗಳು ಇಲಾಖೆಯವರ ಗಮನಕ್ಕೆ ಬರಲಿಲ್ಲವೇ ?

ಶ್ರೀ ಬಿ. ಶಿವಣ್ಣ.— ಸರ್ವೆ ಮಾಡುವುದು ಬೇರೆ ಇನ್‌ಸ್ಪೆಕ್ಷನ್ ಮಾಡುವುದು ಬೇರೆ. ಸರ್ವೆ ಬೇರೆ ಇದೆ. ಇನ್‌ಸ್ಪೆಕ್ಷನ್ ಬೇರೆ ಇದೆ. ಫರ್ಮ್‌ಗಳಿಗೆ ನಮ್ಮ ಲೇಬರ್ ಆಫೀಸರ್ಸ್ ಇನ್‌ಸ್ಪೆಕ್ಷನ್‌ಗೆ ಹೋದ ಮೇಲೆ ಮಾಹಿತಿ ತುಂಬಿರುತ್ತಾರೆ. ಅದನ್ನು ಬೇಕಾದರೆ ತರಿಸಿಕೊಡುತ್ತೇನೆ. ಆ ವಿವರಗಳನ್ನು ಕಲೆಕ್ಟ್ ಮಾಡಿ ತಮ್ಮ ಮುಂದೆ ಬೇಕಾದರೆ ಇಡುತ್ತೇನೆ. ಆದರೆ ಸರ್ವೆ ಮಾತ್ರ ಮಾಡಿಲ್ಲ.

ಶ್ರೀ ಎಂ. ಮಹದೇವ್.— ಎಲ್ಲರಿಗೂ ಕೆಲಸ ಕೊಡುವುದಕ್ಕೆ ಸಮಗೆ ಆಗುವುದಿಲ್ಲ. ಹೇಗೋ ಪಾಪ ಅವರುಗಳು ಕೆಲಸ ಮಾಡಿಕೊಂಡು ಹೋಗಲಿ, ಅದನ್ನು ನಾವು ಏತಕ್ಕೆ ತಡೆ ಮಾಡುವುದು.

ಶ್ರೀ ಬಿ. ಹೆಚ್. ಬನ್ನಿಕೋಡ್.— ಬಾಲ ಕಾರ್ಮಿಕರು ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದಾರೆ, ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ತಿಳಿಯಲು, ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ, ಆದರ ಅಂಕಿ ಸಂಖ್ಯೆಗಳು ಏನಿವೆ ಅದನ್ನು ನೋಡತಕ್ಕಂಥ ಅಧಿಕಾರಿಗಳಿ

ಇದ್ದಾರೆ. ಆದ್ದರಿಂದ ಆ ವಿವರಗಳು ಸರಕಾರದಲ್ಲಿ ಇರುತ್ತವೆ. ಆದರೂ ಮಂತ್ರಿಗಳು ಅದನ್ನು ಇಲ್ಲ ಎಂದು ಹೇಳುತ್ತಿದ್ದಾರೆ. ಈಗಲಾದರೂ ಅದರ ಬಗ್ಗೆ ನೋಡಿ, ಅದನ್ನು ತರಿಸಿಕೊಂಡು ಈ ಮನೆಯಲ್ಲಿ ಒಂದು ಸಮರ್ಪಕವಾದ ಉತ್ತರ ಕೊಡಬೇಕು. ಅಧಿಕಾರಿಗಳು ತಮ್ಮ ಕೆಲಸವನ್ನು ಸರಿಯಾಗಿ ಮಾಡುವುದಕ್ಕೆ ಮಂತ್ರಿಗಳು ಈಗಲಾದರೂ ಸೂಚನೆ ಕೊಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ. ಶಿವಣ್ಣ.— ಮಾನ್ಯ ಅಧ್ಯಕ್ಷರೇ, ೬ ವರ್ಷದಿಂದ ೧೨ ವರ್ಷದೊಳಗಿನ ಬಾಲಕರು ಯಾರೂ ಅಲ್ಲಿ ಕೆಲಸ ಮಾಡುತ್ತಿಲ್ಲ.

ಅಧ್ಯಕ್ಷರು.— ಈಗ ತಾವು ಸರ್ವೆ ಮಾಡಿಲ್ಲವೆಂದು ಹೇಳಿದಿರಿ. ಈಗ ಇದು ಹೇಗೆ ತಮಗೆ ಗೊತ್ತಾಯಿತು?

ಶ್ರೀ ಬಿ. ಶಿವಣ್ಣ.— ನಮ್ಮ ಲೇಬರ್ ಇನ್ಸ್‌ಪೆಕ್ಟರ್ಸ್ ಇನ್ಸ್‌ಪೆಕ್ಷನ್ ಮಾಡಿದ ಇನ್ಸ್‌ಪೆಕ್ಷನ್ ರಿಪೋರ್ಟ್ಸ್ ಇವೆ ಈ ಬಗ್ಗೆ ಮಾನ್ಯ ಸದಸ್ಯರು ಬೇಕಾದರೆ ಅರ್ಧಗಂಟೆ ಕಾಲದ ಚರ್ಚೆಗೆ ಒಪ್ಪಿದರೆ, ನಾನು ಉತ್ತರ ತರಿಸಿಕೊಡುತ್ತೇನೆ.

ಅಧ್ಯಕ್ಷರು.— ಅದೇನು ಬೇಡ. ಈಗ ಬಂದಿರತಕ್ಕಂಥ ಪ್ರಶ್ನೆಯಂ ಆಧಾರದ ಮೇಲೆ ಸರ್ವೆ ಮಾಡುವುದು ವಿಹಿತವೆಂದು ನಿಮಗೆ ಅನಿಸುತ್ತದೆಯೇ ?

ಶ್ರೀ ಬಿ. ಶಿವಣ್ಣ.— ಈಗ ಅನಿಸುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಬಗ್ಗೆ

೩೦೫. ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್).— ಮಾನ್ಯ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೊಂದಾಯಿಸಿದವರ ಸಂಖ್ಯೆ ಎಷ್ಟು ?

ಆ) ಇವರಲ್ಲಿ ವೈದ್ಯರು, ಸ್ನಾತಕೋತ್ತರ ಪದವೀಧರರು, ಇಂಜಿನೀಯರ್, ಕುಶಲಕರ್ಮಿಗಳು, ಅವಿದ್ಯಾವಂತರ ಸಂಖ್ಯೆ ಎಷ್ಟು ?

ಇ) ಯೋಜಿತ ಮಂಗಳೂರು ತೈಲಾಗಾರ, ನಂದಿಕೂರು ವಿದ್ಯುತ್ ಸ್ಥಾವರಗಳ ಉದ್ಯೋಗಗಳಲ್ಲಿ ಶೇಕಡ ೧೦೦ ರಷ್ಟು ಉದ್ಯೋಗಗಳನ್ನು ಸ್ಥಳೀಯರಿಗೆ ಹಾಗೂ ಮಂಗಳೂರು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿತ ನಿರುದ್ಯೋಗಿಗಳಿಗೆ ಆದ್ಯತೆ ನೀಡಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದೇ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಸಚಿವರು).—

ಅ) ೬೩,೦೧೧.

ಆ)

ವೈದ್ಯಕೀಯ ಪದವೀಧರರು	...	೩೪
ಸ್ನಾತಕೋತ್ತರ ಪದವೀಧರರು	...	೫೫೯
ಇಂಜಿನಿಯರಿಂಗ್ ಪದವೀಧರರು	...	೩೭೬
ಕುಶಲ ಕರ್ಮಿಗಳು	...	೨೬೭೨
ಅವಿದ್ಯಾವಂತರು	...	೧೯,೭೪೭

ಇ) ಕೇಂದ್ರ/ರಾಜ್ಯ ಸರ್ಕಾರದ ಉದ್ದಿಮೆಗಳಲ್ಲಿನ ಗರಿಷ್ಠ ಮೂಲ ವೇತನ ರೂ. ೧೨೫೦-೦೦ (ಹಿಂದಿನ ವೇತನ ಶ್ರೇಣಿ) ಇರುವ ಹುದ್ದೆಗಳನ್ನು ಸ್ಥಳೀಯ ಉದ್ಯೋಗ ವಿನಿಮಯ ಕೇಂದ್ರದ ಮುಖಾಂತರವೇ ಭರ್ತಿಮಾಡಬೇಕಾಗಿರುತ್ತದೆ. ಆದರೆ ಹೆಚ್ಚಿನ ಮೂಲವೇತನದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅವಕಾಶವಿರುತ್ತದೆ.

ಶ್ರೀ ವಿಜಯಕುಮಾರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ನಮ್ಮ ಪ್ರಮುಖವಾದ ಮಂಗಳೂರು ತೈಲಾಗಾರ ಮತ್ತು ನಂದಿಕೂರು ವಿದ್ಯುತ್ ಸ್ಥಾವರಗಳಲ್ಲಿ ಇರುವ ಹುದ್ದೆಗಳನ್ನು ನೇರವಾಗಿ